## ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ

**ಸಿಸಿ ಸಂಖ್ಯೆ: 198/2019**

ಚಾ.ಸಾ–01, ಪ್ರಾ.ಸಾ–01

| | | |
|---|---|---|
| ಹೆಸರು | : | ಮಹದೇವಮ್ಮ |
| ಗಂಡನ ಹೆಸರು | : | ಬಸವಯ್ಯ |
| ವಯಸ್ಸು | : | 60 |
| ವೃತ್ತಿ | : | ವ್ಯವಸಾಯ |
| ವಾಸ | : | ಕುಪ್ಯ ಗ್ರಾಮ, ತಿ. ನರಸೀಪುರ ತಾಲ್ಲೂಕು |

**ದಿನಾಂಕ 27.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ–2 ನನ್ನ ಗಂಡ. ಚಾಸಾ–3 ರಿಂದ 6 ರವರ ಪರಿಚಯವಿದೆ. ಈ ದಿನ ನ್ಯಾಯಾಲಯದಲ್ಲಿರುವ 2 ಮತ್ತು 3ನೇ ಆರೋಪಿತರ ಪರಿಚಯವಿದೆ. ಈ ದಿನ ಗೈರುಹಾಜರಾಗಿರುವ 1 ಮತ್ತು 4ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರ ಗುರುತಿಸುವಿಕೆಯ ಬಗ್ಗೆ ಅವರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

ಕಳೆದ 8 ವರ್ಷಗಳ ಹಿಂದೆ ಏಪ್ರಿಲ್ ತಿಂಗಳಿನಲ್ಲಿ ಸಂಜೆ 6.00 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ನನ್ನ ಮೈದ ಜವರಯ್ಯ ರವರ ಮನೆಯ ಮುಂದೆ 1ನೇ ಆರೋಪಿತಳು ನನ್ನ ಮುಂದೆಲೆಯನ್ನು ಹಿಡಿದು ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾಳೆ. ಅದೇ ದಿನ ರಾತ್ರಿ 8.00 ಗಂಟೆಗೆ ನಮ್ಮ ಗ್ರಾಮದ ಮುದ್ದುರಾಜಪ್ಪ ರವರ ಮನೆಯ ಬಾಗಿಲಿನ ಹತ್ತಿರ 4ನೇ ಆರೋಪಿತ ನನ್ನ ಗಂಡನಿಗೆ ಹೊಡೆದಿರುತ್ತಾನೆ. 2ನೇ ಆರೋಪಿತಳು ನನ್ನ 8 ಗ್ರಾಂನ ಒಂದು ಓಲೆ, 3 ಗ್ರಾಂನ ಒಂದು ಓಲೆ ಮತ್ತು 5 ಗ್ರಾಂ ನ ಒಂದು ಉಂಗುರವನ್ನು ನಮ್ಮ ಮನೆಯ ಮಂಚದ

ಮೇಲಿಂದ ಎತ್ತುಕೊಂಡು ಹೋಗಿರುತ್ತಾಳೆ. 3ನೇ ಆರೋಪಿತ ನನಗೆ ಮತ್ತು ನನ್ನ ಗಂಡನಿಗೆ ಬೈದಿರುತ್ತಾನೆ.

ಘಟನೆಯ ದಿನ ಪೊಲೀಸ್ ಠಾಣೆಗೆ ಹೊಗಿ ದೂರು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ **06.03.2018** ರಂದು ಗಲಾಟೆಯಾಗಿದೆ ಎಂದರೆ ಸರಿ. ಆ ದಿನ ರಾತ್ರಿ **8.00** ಗಂಟೆಗೆ ನಾನು ನನ್ನ ಮನೆಯ ಮುಂದೆ ಇದ್ದಾಗ, **1** ಮತ್ತು **2**ನೇ ಆರೋಪಿತರು ನನಗೆ ಬೈದು, ತಮ್ಮ ಕೈಗಳಿಂದ ನನಗೆ ಹೊಡೆದಿರುತ್ತಾರೆ ಎಂದರೆ ಸರಿ. **4**ನೇ ಆರೋಪಿತನು ಕೂಡ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಎಲ್ಲಾ ಆರೋಪಿತರು ಬೈದಿರುತ್ತಾರೆ. ಗಲಾಟೆಯನ್ನು ಬಿಡಿಸಲು ನನ್ನ ಗಂಡ ಮುಂದಾದಾಗ **3** ಮತ್ತು **4**ನೇ ಆರೋಪಿತರು ನನ್ನ ಗಂಡನನ್ನು ಹಿಡಿದುಕೊಂಡು ಅವರ ಕೈಗಳಿಂದ ನನ್ನ ಗಂಡನಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಗಲಾಟೆಯಾದ

ನಂತರ ಆರೋಪಿತರು ಯಾವುದೇ ತೀರ್ಮಾನಕ್ಕೆ ಬರದ ಕಾರಣ ದಿನಾಂಕ **05.04.2018** ರಂದು ದೂರನ್ನು ನೀಡಿರುತ್ತೇನೆ ಎಂದರೆ ಸರಿ.

ದಿನಾಂಕ **06.04.2018** ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ಬೆಳಿಗ್ಗೆ **10.00** ರಿಂದ **10.45** ಗಂಟೆ ಸಮಯದಲ್ಲಿ ನಾನು ತೋರಿಸಿದಂತೆ ಚಾಸಾ-**3** ಮತ್ತು **6** ರವರ ಸಮಕ್ಷಮ ಪಂಚನಾಮವನ್ನು ಜರುಗಿಸಿರುತ್ತಾರೆ ಎಂದರೆ ಸರಿ.

ಪಂಚನಾಮವನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಬಿ.ಆರ್. ವಕೀಲರಿಂದ ಆರೋಪಿತರ ಪರವಾಗಿ :**

ಚಾಸಾ-3 ರವರು ನನ್ನ ಗಂಡನ ಚಿಕ್ಕಪ್ಪನ ಮಗ ಎಂದರೆ ಸರಿ. ಚಾಸಾ-6 ನನ್ನ ತಮ್ಮ ಎಂದರೆ ಸರಿ. ಅವರು ತಿ. ನರಸೀಪುರ ತಾಲ್ಲೂಕಿನ ಸೋಮನಾಥಪುರದ ನಿವಾಸಿ ಎಂದರೆ ಸರಿ.

ದೂರನ್ನು ಪೊಲೀಸ್ ಠಾಣೆಯಲ್ಲಿ ಬರೆದಿದ್ದು, ಅದನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ, ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

ನಮ್ಮ ಮನೆಯಲ್ಲಿ ಇದ್ದ ಎರಡು ಓಲೆಗಳು ಮತ್ತು ಉಂಗುರ ಕಾಣೆಯಾಗಿದ್ದ ಕಾರಣ ನಮ್ಮ ಮನೆಯ ಮುಂಭಾಗ ನಾನು ಬೈಯುತ್ತಿದ್ದೆ. ನನ್ನ ದೂರಿನಲ್ಲಿ ನಮ್ಮ ಮನೆಯಲ್ಲಿಟ್ಟಿದ್ದ ದುಡ್ಡು ಕಾಣಿಸಲಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮನೆಯಲ್ಲಿ ಓಲೆಗಳು ಮತ್ತು ಉಂಗುರ ಕಾಣೆಯಾಗಿದೆ ಎಂದು ನನಗೆ ಗೊತ್ತಾದಾಗ ದೂರನ್ನು ಕೊಡಲು ತೊಂದೆ ಇರಲಿಲ್ಲ. ಘಟನೆಯಾದ ದಿನವೆ ದೂರು ನೀಡಿದ್ದು, ತಡವಾಗಿ ದೂರು ನೀಡಿಲ್ಲ.

ಚಾಸಾ–3 ಮತ್ತು 3ನೇ ಆರೋಪಿತನ ನಡುವೆ ವೈಮನಸ್ಸು ಇದೆ ಎಂದರೆ ನನಗೆ ಗೊತ್ತಿಲ್ಲ. ಅವರ ನಡುವೆ ವೈಮನಸ್ಸು ಇರುವ ಕಾರಣ ಚಾಸಾ–3 ರವರು ನನ್ನ ಮೂಲಕ ಆರೋಪಿತರ ವಿರುದ್ಧ ಸುಳ್ಳು ದೂರು ಕೊಡಿಸಿದ್ದಾನೆ ಎಂದರೆ ಸರಿಯಲ್ಲ.

ಚಾಸಾ–3 ರವರ ಮನೆ ನಮ್ಮ ಗ್ರಾಮದ ಬಸ್ ನಿಲ್ದಾಣದ ಬಳಿ ಇದೆ ಎಂದರೆ ಸರಿ. ಅವರ ಮನೆಯಿಂದ ನಮ್ಮ ಮನೆಗೆ ಬರಲು ಸುಮಾರು 8–10 ನಿಮಿಷಗಳು ಬೇಕು ಎಂದರೆ ಸರಿ.

ಆರೋಪಿತರು ನಾನು ಹೇಳುವಂತೆ ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಶಾಂತಮ್ಮ ರವರ ಮಗ ಬೆಂಗಳೂರಿನಲ್ಲಿ ಪೊಲೀಸ್ ನಿರೀಕ್ಷಕರಾಗಿದ್ದಾರೆ ಎಂದರೆ ಸರಿ. ಅವರ ಪ್ರಭಾವ ಬೀರಿಸಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಪೊಲೀಸ್ ಠಾಣೆಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಓಲೆಗಳು ಮತ್ತು ಉಂಗುರ ಸಿಕ್ಕಿವೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರು ಮಾಡಿರುವ ಪಾಟೀ ಸವಾಲಿನಲ್ಲಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**